# ನಮ್ಮ ಬಾವುಟ

■ ವಾ. ಮುರಳೀಧರ
ಚಿತ್ರ: ವಿಜಯ ಕುಮಾರಿ ಆರ್



ನಮ್ಮಯ ಬಾವುಟ ಗಗನವ ಏರಿ
ವಿವಿಧತೆಯಲ್ಲಿಯು ಏಕತೆ ತೋರಿ
ಸ್ವಾತಂತ್ರ್ಯದ ಅಮೃತ ಧಾರೆಯ ಹೀರಿ
ಹಾರಿದೆ ಮನೆಮನೆ ಮೇರೆಯ ಮೀರಿ

ಕಣ್ಣಿಗೆ ಹಬ್ಬವನೀಯುವ ನೋಟ
ಮನಮನೆ ತುಂಬಿಹ ಸಡಗರದೂಟ
ಧೈರ್ಯವ ನೀಡುವ ಕೇಸರಿ ಬಣ್ಣ
ಹೋಳಿಯ ನೆನಪನು ತರುವುದೊ ಅಣ್ಣ

ಶಾಂತಿಯ ಸಾರುವ ಅತಿಬಿಳಿ ಬಣ್ಣ
ನೆಮ್ಮದಿ ಎಲ್ಲೆಡೆ ಹರಡುವುದಣ್ಣ
ಸಮೃದ್ಧಿ ಸಾರುವ ಹಸಿರಿನ ಬಣ್ಣ
ಕೃಷಿಕರ ಬದುಕಿನ ಸಮೃದ್ಧ ಬಣ್ಣ

ನಡುವಿನ ಚಕ್ರವೆ ದೇಶದ ಗಾಲಿ
ಉರುಳುತ ಹೊಡೆದಿದೆ ಗೆಲುವಿನ ಜೋಲಿ
ನೀಲಿಯ ಆಗಸ ಸಾಗರದಲ್ಲಿ
ಮೋಡದ ಬಿಳಿಬಿಳಿ ತೆರೆತೆರೆಯಲ್ಲಿ

ಬೆಳಗುವ ಕೇಸರಿ ಸೂರ್ಯನ ತೆರದಿ
ಬಾನಲಿ ನಗುತಿಹ ಬಾವುಟವಣ್ಣ
ಹಿರಿಯರ ತ್ಯಾಗವ ನೆನೆಯುವ ಬನ್ನಿ
ಭಾರತ ಮಾತೆಗೆ ಜಯಜಯವೆನ್ನಿ ■

## ಕುಂಚ ಪ್ರಪಂಚ





**ವಿರಾಟ್ ಎಂ**
2ನೇ ತರಗತಿ
ಟೆರೆಸಿಯನ್
ಹೈಯರ್ ಪ್ರೈಮರಿ
ಶಾಲೆ, ಮೈಸೂರು



**ಉನ್ನತಿ ಎಂ. ರಾವ್**
ಯುಕೆಜಿ, ಭಾರತಿ ವಿದ್ಯಾಲಯ,
ಬೆಂಗಳೂರು





**ಸಿಂಚನಾ ಆಧ್ಯಾ**
5 ವರ್ಷ, ಎಚ್‌ಎಸ್‌ಆರ್
ಬಡಾವಣೆ, ಬೆಂಗಳೂರು

